**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020 C/W ಎಸ್.ಸಿ.ನಂ.137/2022**

(ಚಾ.ಸಾ.10/ಪ್ರಾ.ಸಾ.8)

ತಾಃ 19.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಡಾ.ಜಯಶ್ರೀ |
| ಗಂಡನ ಹೆಸರು | ಚಂದ್ರಶೇಖರ್ |
| ವಯಸ್ಸು | 34 ವರ್ಷ |
| ಉದ್ಯೋಗ | ಕ್ಲಿನಿಕಲ್ ಅಸಿಸ್ಟೆಂಟ್, ಅನುಪಮಾ ಆಸ್ಪತ್ರೆ |
| ವಾಸ ಸ್ಥಳ | ಬ್ಯಾಡರಹಳ್ಳಿ, ಬೆಂಗಳೂರು |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ ಅನುಪಮಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ದಿಃ07.08.2019 ರಂದು ಸಂಜೆ 6.50 ರಲ್ಲಿ ಚಾಸಾ.3 ರವರು ತನ್ನ ಮೇಲೆ ಚಂದನ್ ಎಂಬುವವರು ಹಲ್ಲೆ ಮಾಡಿದ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆಯಲು ಬಂದಿದ್ದರು. ಅವರನ್ನು ಪರೀಕ್ಷೆಗೆ ಒಳಪಡಿಸಿದಾಗ ಅವರ ಎಡ ತೋಳಿನಲ್ಲಿ ಪೆಟ್ಟಾಗಿದ್ದು ಚಿಕಿತ್ಸೆ ನೀಡಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ನಾನು

ಎಮ್ ಎಲ್ ಸಿ ವರದಿಯನ್ನು ಕಳುಹಿಸಿರುತ್ತೇನೆ. ಸಾಕ್ಷಿದಾರರು ತಾನು ಕಳುಹಿಸಿದ ಎಮ್ ಎಲ್ ಸಿ ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4, ನಿ.ಪಿ.4(ಎ) ಎಂದು ಗುರುತಿಸಲಾಯಿತು.

2. ಅದೇ ದಿನ ಅದೇ ಸಮಯದಲ್ಲಿ ಚಾಸಾ.2 ರವರು ತನ್ನ ಮೇಲೆ ಚರಣ್ ಎಂಬುವವರು ಹಲ್ಲೆ ಮಾಡಿದ ವಿಚಾರವಾಗಿ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬಂದಿದ್ದರು. ಅವರನ್ನು ಪರೀಕ್ಷೆಗೆ ಒಳಪಡಿಸಿ ಚಿಕಿತ್ಸೆ ನೀಡಿ ಎಮ್ ಎಲ್ ಸಿ ವರದಿಯನ್ನು ಕಳುಹಿಸಿರುತ್ತೇನೆ. ಸಾಕ್ಷಿದಾರರು ತಾನು ನೀಡಿದ ಎಮ್ ಎಲ್ ಸಿ ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5, ನಿ.ಪಿ.5(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಅದೇ ಸಮಯದಲ್ಲಿ ಚಂದನ್ ಎಂಬ ಗಾಯಾಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು ಆತನನ್ನು ಪರೀಕ್ಷೆಗೆ ಒಳಪಡಿಸಿದಾಗ ಆತನ ಬಲ ಹಿಮ್ಮಡಿಯಲ್ಲಿ ಗುಂಡು ಹೊಡೆದ ಗಾಯ ಆಗಿತ್ತು. ಆತನ್ನು ಚಿಕಿತ್ಸೆಗೆ ಒಳಪಡಿಸಿ ಎಮ್ ಎಲ್ ಸಿ ವರದಿಯನ್ನು ಕಳುಹಿಸಿರುತ್ತೇನೆ. ಸಾಕ್ಷಿದಾರರು ತಾನು ನೀಡಿದ ಎಮ್ ಎಲ್ ಸಿ ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6, ನಿ.ಪಿ.6(ಎ) ಎಂದು ಗುರುತಿಸಲಾಯಿತು.

4. ಅದೇ ದಿನ ಅದೇ ಸಮಯದಲ್ಲಿ ಚರಣ್ ಎಂಬ ಗಾಯಾಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು ಆತನನ್ನು ಪರೀಕ್ಷೆಗೆ ಒಳಪಡಿಸಿದಾಗ ಆತನ ಬಲ ಕಾಲಿನಲ್ಲಿ ಗುಂಡು ಹೊಡೆದ ಗಾಯ ಆಗಿತ್ತು. ಆತನ್ನು ಚಿಕಿತ್ಸೆಗೆ ಒಳಪಡಿಸಿ ಎಮ್ ಎಲ್ ಸಿ ವರದಿಯನ್ನು ಕಳುಹಿಸಿರುತ್ತೇನೆ. ಸಾಕ್ಷಿದಾರರು ತಾನು ನೀಡಿದ ಎಮ್ ಎಲ್ ಸಿ ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.7, ನಿ.ಪಿ.7(ಎ) ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಆರೋಪಿ ಪರ ವಕೀಲರು ಗೈರು ಹಾಜರಿದ್ದು ಯಾರು ಪ್ರತಿನಿಧಿಸಿಲ್ಲ. ಪುನಃ ಪ್ರಕರಣವನ್ನು ಮಧ್ಯಾಹ್ನ 12.55 ರಲ್ಲಿ ಕೂಗಿಸಿದ್ದು ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿಗೆ ನ್ಯಾಯಾಲಯವು ಆತನ ಪರ ವಕೀಲರು ಹಾಜರಾಗದೇ ಇರುವ ವಿಚಾರವನ್ನು ತಿಳಿಸಿ ಅವಶ್ಯಕತೆ ಇದ್ದಲ್ಲಿ ಸರ್ಕಾರಿ ವಕೀಲರನ್ನು ನೇಮಿಸಿಕೊಳ್ಳಲು ತಿಳಿಸಿದ್ದು ಆರೋಪಿ ತನ್ನ ಪರ ವಕೀಲರನ್ನು ಮುಂದಿನ ಹಿಯರಿಂಗ್ ತಾರೀಖಿನಂದು ಹಾಜರುಪಡಿಸುವುದಾಗಿ ಹೇಳಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಎಸ್.ಸಿ.ನಂಬರ್ 137/2022 ರ ಕೇಸಿನ ಆರೋಪಿ ಪರ ವಕೀರನ್ನು ಕೂಗಿಸಿದ್ದು ಗೈರು ಹಾಜರಿದ್ದು ಯಾರು ಪ್ರತಿನಿಧಿಸದೇ ಇರುವ ಕಾರಣ ಆರೋಪಿ ಪರ ಪಾಟೀ

ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.